ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	:	ಶ್ರೀ ಕೆ.ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**181**
ಉತ್ತರಿಸಬೇಕಾದ ದಿನಾಂಕ	:	16.02.2022
ಉತ್ತರಿಸಬೇಕಾದ ಸಚಿವರು	:	ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ವಿವಿಧ ವಸತಿ ಯೋಜನೆಗಳಡಿ ಮನೆ ನಿರ್ಮಿಸಿಕೊಂಡು ವಾಸವಾಗಿದ್ದು 10 ವರ್ಷಗಳ ಅವಧಿ ಪೂರ್ಣಗೊಳಿಸಿದ ನಂತರ ಮನೆ/ ನಿವೇಶನವನ್ನು ಡೀಮ್ಡ್ ರಿಲೀಸ್ ಮಾಡುವಂತೆ ವಸತಿ ಇಲಾಖೆಯು ದಿನಾಂಕ:04/09/2020 ರ ಆದೇಶದಲ್ಲಿ ತಿಳಿಸಿರುವುದು ನಿಜವೇ;	ಹೌದು. ಸರ್ಕಾರದಿಂದ ಮನೆ/ನಿವೇಶನ ಪಡೆದು ಸಾಲ/ಸಹಾಯ ಧನ/ವೈಯಕ್ತಿಕ ಅನುದಾನದಿಂದ ವಿವಿಧ ವಸತಿ ಯೋಜನೆಗಳಡಿ ಮನೆ ನಿರ್ಮಿಸಿ ಕೊಂಡು ವಾಸವಾಗಿದ್ದು, 10 ವರ್ಷಗಳ ಅವಧಿ ಪೂರ್ಣಗೊಳಿಸಿದ ನಂತರ ಮನೆ/ನಿವೇಶನವನ್ನು ಅಡಮಾನ ಮುಕ್ತ(ಡೀಮ್ಡ್ ರಿಲೀಸ್)ಗೊಳಿಸಲು ಸರ್ಕಾರದ ಆದೇಶ:ವಇ 54 ಹೆಚ್‌ಎಹೆಚ್ 2020, ದಿನಾಂಕ:04.09.2020 ರಲ್ಲಿ ಆದೇಶಿಸಲಾಗಿದೆ.
ಆ)	ಫಲಾನುಭವಿಗೆ ಮನೆ ಮಂಜೂರಾತಿ ಆದೇಶ ಪತ್ರ ನೀಡಿ 3-4 ವರ್ಷಗಳ ನಂತರ ಅನುದಾನ ಬಿಡುಗಡೆಯ ವಿಳಂಬ ಇತ್ಯಾದಿ ಕಾರಣಗಳಿಂದ ಮನೆ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವ ಉದಾಹರಣೆಗಳಿದ್ದು, ಇಂತಹ ಸಂದರ್ಭದಲ್ಲಿ ಮನೆ/ನಿವೇಶನದ ಅಡಮಾನವನ್ನು ಡೀಮ್ಡ್ ರಿಲೀಸ್ ಎಂದು ಪರಿಗಣಿಸಲು, ಮನೆ ಮಂಜೂರಾತಿ ಆದೇಶ ನೀಡಿದ ದಿನಾಂಕ ಪರಿಗಣಿಸಬೇಕೇ;	ವಿವಿಧ ವಸತಿ ಯೋಜನೆಗಳಡಿ ಸ್ವಂತ ನಿವೇಶನದಲ್ಲಿ ಸಹಾಯಧನ ಪಡೆದು ಮನೆ ನಿರ್ಮಿಸಿ ಕೊಂಡಿರುವ/ ನಿರ್ಮಿಸಿ ಕೊಳ್ಳುವ ಫಲಾನುಭವಿಗಳ ಆಸ್ತಿ/ನಿವೇಶನವನ್ನು ಅಡಮಾನ ನೋಂದಣಿಯಿಂದ ಸಂಪೂರ್ಣವಾಗಿ ರದ್ದುಪಡಿಸಲು, ಸರ್ಕಾರದ ಆದೇಶ ಸಂಖ್ಯೆ:ವಇ 2 ಹೆಚ್‌ಎಹೆಚ್ 2022, ದಿನಾಂಕ: 28.01.2022 ರಲ್ಲಿ ಆದೇಶ ಹೊರಡಿಸಲಾಗಿದೆ.
ಇ)	ಫಲಾನುಭವಿಗೆ ಕೊನೆಯ ಕಂತಿನ ಅನುದಾನವನ್ನು ಬಿಡುಗಡೆ ಮಾಡಿದ ದಿನಾಂಕವನ್ನು ಪರಿಗಣಿಸಬೇಕೇ ? (ಮಾಹಿತಿ ನೀಡುವುದು)	ಅಡಮಾನ ನೋಂದಣಿಯನ್ನು ರದ್ದುಪಡಿಸಿರುವುದರಿಂದ ದಿನಾಂಕವನ್ನು ಪರಿಗಣಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ :ವಇ 35 ಹೆಚ್‌ಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು